ಸೃಜನಿ
SRUJANI: Indian Journal of Innovative Research and Development (SIJIRD)
Volume-3 Issue 1, March-April 2024, Pp. 142-145
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಹೊಸ ತಲೆಮಾರಿನ ದಲಿತ ಕಾವ್ಯ : ಚಿಂತನೆಯ ಚಿಂತಕ ಟಿ.ಯಲ್ಲಪ್ಪ

ನಾಗಪ್ಪ[1] ಮತ್ತು ಪ್ರೊ.ಟಿ.ಕೆ.ಕೆಂಪೇಗೌಡ[2]
[1] ಸಂಶೋಧನಾ ವಿದ್ಯಾರ್ಥಿ, [2] ಪ್ರಾಧ್ಯಾಪಕರು
ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

***Abstract:***

*ಸಾರಾಂಶ:*

*ಕನ್ನಡ ಕಾವ್ಯ ಲೋಕದಲ್ಲಿ ಕವಿತೆ ಕುರಿತು ಹೇಳುವುದಾದರೆ ಕವಿತೆಯು ಚರಿತ್ರೆಯ ಚಿತ್ರಣವನ್ನು ಚಿತ್ರಿಸುವುದಾಗಿದೆ. ಕಲ್ಪನೆಗಿಂತ ಹೆಚ್ಚಾಗಿ ನೈಜ ಅನುಭವಗಳನ್ನೇ ಆವರಿಸಿಕೊಂಡಿರುತ್ತದೆ. ಹಾಗಾಗಿ ಕವಿತೆಯು ತನಗರಿವಿಲ್ಲದಂತೆ ತನ್ನ ಸಂದರ್ಭದ ಅದ್ಭುತ ಇತಿಹಾಸವನ್ನು ಕಟ್ಟಿಕೊಡುವುದಾಗಿದೆ. ಅದನ್ನು ಗಮನಿಸದಿದ್ದರೂ ಕಣ್ಣುಗಳಿಗೆ ಹಾಗೂ ಮನಸುಗಳಿಗೆ ಸಿಕ್ಕಿಬಿಡುತ್ತದೆ. ಹೀಗೆ ನಮ್ಮ ಭರತಭೂಮಿಯಲ್ಲಿ ಹಲವಾರು ಜಾತಿ, ಮತ-ಧರ್ಮ, ಪಂಥ ಬಡತನ, ಹಸಿವು, ಅಪಮಾನ, ಅಸಮಾನತೆಗಳು ಸಮಾಜದಲ್ಲಿ ಒಂದು ದೊಡ್ಡ ಅನಾರೋಗ್ಯಕರವಾದ ವಾತಾವರಣ ನಿರ್ಮಾಣ ಮಾಡಿವೆ. ಪ್ರಾಚೀನ ಕಾಲದಿಂದಲೂ ಪ್ರಸ್ತುತದವರೆಗೂ, ಪ್ರಜ್ಞಾತೀತವಾಗಿಯೂ ಮತ್ತು ಅಪ್ರಜ್ಞಾತೀತವಾಗಿಯೂ ನೆಲೆನಿಂತು ವೈದಿಕ ಮನಸುಗಳಿಂದ ಜನರನ್ನು ಒಡೆದು ಹೋಳಾಗಿಸಿ, ವರ್ಣವ್ಯವಸ್ಥೆಯ ಪಾಪದ ಕೂಸಾಗಿವೆ. ಈ ಸಂಗತಿಗಳು ಹಸಿವು ಮತ್ತು ಬಡತನಗಳೇ ಆಗಿವೆ. ಹಾಗಾಗಿ ಈ ಹಸಿವು ಮತ್ತು ಬಡತನದ ಬಾಳು ಕಾವ್ಯದ ನೆಲೆಗಳಾಗಿ ಕಾಣಿಸಿಕೊಳ್ಳುತ್ತದೆ.*

**Keywords:** *ಕನ್ನಡ ಸಾಹಿತ್ಯ, ದಲಿತ ಕಾವ್ಯ, ಬಂಡಾಯ ಸಾಹಿತ್ಯ, ಟಿ.ಯಲ್ಲಪ್ಪ.*

**ಪೀಠಿಕೆ**

ಕಾವ್ಯಗಳ ಮೂಲಕ ಸಾಮಾಜಿಕ ಚರಿತ್ರೆಯ ವಿಡಂಬನೆ, ಅನಾರೋಗ್ಯಕರ ಮನಸ್ಸುಗಳನ್ನು ಆರೋಗ್ಯಕರವಾಗಿ ಮಾಡುವುದೇ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಬಡತನ, ಹಸಿವು, ಜಾತಿವ್ಯವಸ್ಥೆಯನ್ನು ಹೋಗಲಾಡಿಸುವ, ಹೆಣ್ಣಿನ ಸ್ಥಾನಮಾನಗಳ ಭದ್ರತೆ, ಸುಂದರ ಬದುಕಿನ ಆಸೆಯ, ಭವ್ಯ ಭಾರತದ ಕನಸು, ಸಮಸಮಾಜದ ನಿರ್ಮಾಣ ಮಾಡುವಲ್ಲಿನ ತುಡಿತ, ಪ್ರತಿಭಟನಾತ್ಮಕ ಹೆಜ್ಜೆಗಳು ಹಾಗೂ ಹೀಗೆ ಹತ್ತು ಹಲವು ವಿಷಯ ವಿಚಾರಗಳನ್ನು ಹೊತ್ತು ಕವಿತೆಗಳು ಟಿ.ಯಲ್ಲಪ್ಪ ಅವರ ಕಾವ್ಯಗಳಲ್ಲಿ ಹರಿದು ಬರುತ್ತವೆ.

ಟಿ.ಯಲ್ಲಪ್ಪ ಅವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯವರಾಗಿದ್ದು, ಕಡು ಬಡತನದಲ್ಲಿ ಹುಟ್ಟಿ ಬಾಲ್ಯದ ಸುಂದರ ಕನಸುಗಳೆಲ್ಲ ಕಮರಿಹೋಗಿ, ತುತ್ತು ಕೂಳಿಗಾಗಿ ಹೋರಾಟದ ಬದುಕಿನ ಹಾದಿಯಲ್ಲಿ ಬಿದ್ದು ಎದ್ದು ಅಸ್ಪೃಶ್ಯತೆಯ ಕರಾಳ ಕೈಗಳಿಂದ ಬಹುದೂರ ಸಾಗಿದವರಾಗಿದ್ದಾರೆ. ಅಕ್ಷರಜ್ಞಾನ ಗಳಿಸಿಕೊಂಡ ಟಿ.ಯಲ್ಲಪ್ಪ ಅವರು ತಾವು ಕಂಡುಂಡ ಬದುಕಿನ ಕಷ್ಟಗಳು ಅವಮಾನಗಳು, ಅಪಮಾನಗಳು, ಹಸಿವು, ಬಡತನ, ಜಾತಿವ್ಯವಸ್ಥೆ, ಸಾಮಾಜಿಕ ಅಸಮಾನತೆಗಳು, ಅವರ ಬದುಕಿನಲ್ಲಿ

***Please cite this article as:*** ನಾಗಪ್ಪ ಮತ್ತು ಟಿ.ಕೆ.ಕೆಂಪೇಗೌಡ. (2024). ಹೊಸ ತಲೆಮಾರಿನ ದಲಿತ ಕಾವ್ಯ : ಚಿಂತನೆಯ ಚಿಂತಕ ಟಿ.ಯಲ್ಲಪ್ಪ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(1), 142–145.

ತಾಂಡವಾಡುತ್ತಲೇ ಇದ್ದವು. ಹೀಗಿದ್ದರೂ ಛಲ ಬಿಡದೆ ಶಿಕ್ಷಣ ಪಡೆದು ಉನ್ನತ ಸ್ಥಾನದಲ್ಲಿ ನೆಲೆ ನಿಲ್ಲುವ ಮಹಾದಾಶೆಯನ್ನು ಹೊತ್ತು, ಒಂದು ಹಂತದ ಹುದ್ದೆಯನ್ನು ತಲುಪುತ್ತಾರೆ. ತಾನು ಅನುಭವಿಸಿದ ಅನುಭವಗಳನ್ನೆಲ್ಲ ಕಾವ್ಯ ರೂಪದಲ್ಲಿ ಹೊರಹಮ್ಮಿಸುವಲ್ಲಿ ಸಕ್ರೀಯರಾಗಿ ಶಾಲಾ ದಿನಗಳೆಂದರೆ ಕವಿತೆಗಳನ್ನು ರಚಿಸಲು ಮುಂದಾಗಿದ್ದದು ಕಂಡುಬರುತ್ತದೆ.

ಸಾಮಾಜಿಕ ಚರಿತ್ರೆಗಳನ್ನು ಒಳಗೊಂಡಂತೆ ಮತ್ತು ತಮ್ಮ ಬದುಕಿನಲ್ಲಿ ಅನುಭವಿಸಿದ ಅನುಭವಗಳನ್ನೇ ಕಾವ್ಯರೂಪದಲ್ಲಿ ರಚಿಸಿ, ತನ್ನ ಸುತ್ತಲಿನ ಹಾಗೂ ನಾಡಿನ ಎಲ್ಲಾ ಜನಸಾಮಾನ್ಯರಿಗೆ ಕರುಣೆ, ಶಾಂತಿ, ಸಹಬಾಳ್ವೆಗಳನ್ನು ಮನವರಿಕೆ ಮಾಡುತ್ತಾ, ದಲಿತ ಬಂಡಾಯ, ಪ್ರಗತಿಪರ ಸಂವೇದನೆಗಳನ್ನು ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ವ್ಯವಸ್ಥೆಗಳ ಹರಿತವಾದ ವಿಮರ್ಶೆಯನ್ನು ಮನದಟ್ಟು ಮಾಡುವಂತದ್ದಾಗಿದೆ. ಸಹಜ ಕವಿಯ ಹೃದಯದ ಅಂತರಾಳದ ಕನವರಿಕೆಗಳನ್ನು ಗಂಭೀರವಾಗಿ ಬರವಣಿಗೆಯಲ್ಲಿ ತೊಡಗಿಸಿಕೊಂಡಿರುವ ಟಿ.ಯಲ್ಲಪ್ಪ ಅವರು, ವೈಚಾರಿಕ ಬರಹದ ಮೂಲಕ ನಾಡಿನ ಹಾಗೂ ಕಾವ್ಯ ಲೋಕದಲ್ಲಿ ಚಿರಪರಿಚಿತರಾದ ಚಿಂತಕರು, ಕವಿಗಳು, ಲೇಖಕರು, ವಿಮರ್ಶಕರು ಆಗಿದ್ದಾರೆ.

ಸಮಾಜದಲ್ಲಿ ಕಳೆದು ಹೋಗುತ್ತಿರುವ ಮಾನವೀಯತೆಯನ್ನು ತಮ್ಮ ಕಾವ್ಯಗಳ ಮೂಲಕ ಹುಡುಕುತ್ತಾರೆ. ಹಸಿವು, ಬಡತನ, ಅಸ್ಪೃಶ್ಯತೆ ಅನಾಗರಿಕತೆ, ಮತ–ಮೌಢ್ಯ, ಜಾತಿ–ಪಂಥ, ಅಸಮಾನತೆಯ ಕತ್ತಲು ಕವಿದ ಈ ವರ್ಣವ್ಯವಸ್ಥೆಯ ಸಾಮಾಜಿಕ ಕಡಲಲ್ಲಿ, ಸಮಾನತೆಯ ಸಾಕ್ಷರತೆ, ಮಾನವೀಯತೆ, ಪ್ರೀತಿ–ಸ್ನೇಹ ಸಂಬಂಧಗಳನ್ನು ಬೆಸೆಯುವಲ್ಲಿ ಬರವಣಿಗೆಯ ಛಾಯೆ ಹಾಸುಹೊಕ್ಕಾಗಿದೆ. ಸಮಸಮಾಜದ ಕನಸನ್ನು ನನಸಾಗಿಸಲು, ದಿನದಲಿತರ ಬದುಕಿಗೆ ಬೆಳಕಾಗುವ ನೊಂದವರ ನೋವಿನಲ್ಲೂ ನಗುವಾಗುವ ಕವಿತೆಗಳೆಂಬ ದೀಪಗಳನ್ನು ಜನಸಾಮಾನ್ಯರೆಡಗೆ, ಸಮಾಜದೊಳಗೆ ಕೊಂಡೊಯ್ದು ಬದುಕಿನಲ್ಲಿ ಬೆಳಕನ್ನು ಚೆಲ್ಲುವಂತೆ ಮಾಡಿರುವುದು ವಿಶೇಷವೆನಿಸುತ್ತದೆ.

ಸಮನ್ವಯದ ತಳಹದಿಯ ಮೇಲೆ ಜನತೆಯು ಬದುಕು ಕಟ್ಟಿಕೊಂಡು ಜಾತಿಯಿಲ್ಲದ, ಮತ–ಮೌಢ್ಯವಿಲ್ಲದ, ಸಂಘರ್ಷಗಳಿಲ್ಲದ, ಅಸಮಾನತೆಯಿಲ್ಲದ ನಾಡನ್ನು ಕಟ್ಟಬೇಕು ಎನ್ನುವಂತಹ ಸದಾಶಯ ಹೊತ್ತು ಅಕ್ಷರ ಸೇವೆಯಲ್ಲಿ ನಿರಂತರವಾಗಿ ತೊಡಗಿಸಿಕೊಂಡಿರುವುದು ಅನುಪಮವಾಗಿದೆ. ಜನ್ಮದಿಂದಲೇ ಕೆಳಜಾತಿ ಎನ್ನುವ ಬಿರುದನ್ನು ಅವಮಾನಗಳನ್ನು ಹೊತ್ತುಕೊಂಡು, ಅವುಗಳ ವಿರುದ್ಧ ಹೋರಾಡುತ್ತಲೇ ವಿದ್ಯಾವಂತರಾಗಿ ಕವಿಯಾಗಿ, ಲೇಖಕರಾಗಿ, ವಾಗ್ಮಿಗಳಾಗಿ, ವಿಮರ್ಶಕರಾಗಿ, ಕನ್ನಡ ಸಾಹಿತ್ಯ ಲೋಕಕ್ಕೆ ಹಲವಾರು ಕವನ ಸಂಕಲನಗಳು, ವಿಮರ್ಶೆಗಳು, ಸಂಶೋಧನಾ ಕೃತಿಗಳು ಹಾಗೂ ಇನ್ನಿತರ ಸಾಹಿತ್ಯ ಕೃಷಿಯನ್ನು ಅರ್ಪಿಸಿರುವುದು ಟಿ.ಯಲ್ಲಪ್ಪ ಅವರ ವೈಯಕ್ತಿಕ ಸ್ವಾರ್ಥವಿಲ್ಲದ ಸಾಹಿತ್ಯ ಸಾಧನೆ ಸ್ಮರಣೀಯವಾಗಿದೆ.

ಟಿ.ಯಲ್ಲಪ್ಪ ಅವರ ಈ 'ಕಡಲಿಗೆ ಕಳಿಸಿದ ದೀಪ' ಎಂಬ ಕವನ ಸಂಕಲನವು ಬದುಕಿನ ಬವಣೆವನ್ನು ಸಾಮಾಜಿಕ ಹೊಣೆಗಾರಿಕೆಯನ್ನು ಹೊಡೆದು ಹೋಗುತ್ತಿರುವ ಮನಸುಗಳನ್ನು ಕತ್ತಲು ತುಂಬಿದ ಸಮಾಜದಲ್ಲಿ, ದೀನದಲಿತರ ಬದುಕಿಗೆ ಬೆಳಕು ನೀಡುವ ದೀಪವಾಗಿ ಬದುಕನ್ನು ಬೆಳಗಾಗಿಸಿಕೊಳ್ಳುವಂತೆ ಕವಿತೆಗಳೇ ದೀಪಗಳಾಗಿ ಸಂಕೇತಿಸುತ್ತವೆ. ಬಡತನ, ಹಸಿವು, ಅಂಧಕಾರ, ದೌರ್ಜನ್ಯ, ಅಸ್ಪೃಶ್ಯತೆ, ಜಾತಿ–ವರ್ಣ, ಮತಬೇಧಗಳಿಂದ ತುಂಬಿದ ಈ 'ಬದುಕೆಂಬ ಕಡಲು' ಸಂಕೇತವಾಗಿ ಕಾಣಬರುತ್ತದೆ.

ಟಿ.ಯಲ್ಲಪ್ಪ ಅವರು ಕವಿ ಎನಿಸಿಕೊಳ್ಳಬೇಕೆಂಬ ಆಸೆಯಿಂದ ಬಲವಂತದಿಂದ ಬರೆದ ಕವಿತೆಗಳಲ್ಲ. ಬದಲಿಗೆ ಅವರ ಒಳಗಿರುವ ಕವಿಯ ಹೃದಯ

ಅಂತರಾಳದ ಕನವರಿಕೆಗಳು, ಕನಸುಗಾರಿಕೆಗಳು, ಅನುಭವಿಸಿದ ಅಲೆಗಳಾಗಿ, ಸಾಮಾಜಿಕ ಹೊಣೆಗಾರಿಕೆಯನ್ನು ಇವರ ಎಲ್ಲಾ ಕವಿತೆಗಳಲ್ಲಿ ಎದ್ದು ಕಾಣುವುದಾಗಿದೆ. ಟಿ.ಯಲ್ಲಪ್ಪನವರು ಚಿಕ್ಕ ವಯಸ್ಸಿನಿಂದಲೇ ಕಾರಂತ, ಪುತಿನ, ಅಡಿಗ, ಇತರೆ ಮಹಾನ್ ಕವಿಗಳ ಕವಿತೆಗಳನ್ನು ಪ್ರಸ್ತುತ ಪಡಿಸುತ್ತಾ, ಪ್ರಭಾವದ ಫಲವೆಂಬಂತೆ ಕವಿತೆಗಳಲ್ಲಿನ ಸಂಗತಿಗಳು ಎಲ್ಲರನ್ನೂ ಹುರಿದುಂಬಿಸುತ್ತವೆ.

ಡಾ.ಸಿದ್ದಲಿಂಗಯ್ಯನವರ ಕವಿತೆಗಳಂತೆ ಬಡತನದ ಅನುಭವದ ಚಿತ್ರಣಗಳ ಮಾದರಿಯಂತೆ ಯಲ್ಲಪ್ಪನವರ ಕವಿತೆಗಳು ದಲಿತರು ಅನುಭವಿಸಿದ ಶೋಷಣೆಯ ಚಿತ್ರಣಗಳು ಎದ್ದು ಕಾಣುತ್ತವೆ. ಟಿ.ಯಲ್ಲಪ್ಪ ಅವರು ಶಾಲಾ ದಿನಗಳಲ್ಲಿ ಕವಿತೆಗಳ ಮೂಲಕ ಪರಿಚಯ ಮಾಡಿಕೊಂಡ ಬಾಲಕನಾಗಿದ್ದರಂತೆ. ಅಂದಿನಿಂದ ತಮ್ಮ ಸ್ವಅನುಭವದ ಕವಿತೆಗಳು ಪ್ರಸ್ತುತ ಸಾಲಿನಲ್ಲಿ ಶೈಕ್ಷಣಿಕ ಕ್ಷೇತ್ರದ ಪ್ರಾಥಮಿಕಶಾಲಾ ಹಂತ, ಪ್ರೌಢಶಾಲಾ ಹಂತ ಹಾಗೂ ಪಿಯುಸಿ ಹಂತದಲ್ಲೂ ಪಠ್ಯಗಳಾಗಿ ವಿದ್ಯಾರ್ಥಿಗಳು ಓದುತ್ತಿದ್ದಾರೆ. ಹಾಗೂ ತುಮಕೂರು ವಿಶ್ವವಿದ್ಯಾನಿಲಯ, ಬೆಂಗಳೂರು ವಿಶ್ವವಿದ್ಯಾನಿಲಯ, ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯ, ಜೈನ್ ವಿಶ್ವವಿದ್ಯಾಲಯಗಳಲ್ಲಿ ಯಲ್ಲಪ್ಪನವರ ಪದ್ಯಗಳು ಪಠ್ಯಗಳಾಗಿರುವುದು ಅವರ ಕವಿತೆಗಳ ಮಹತ್ವ ಮತ್ತು ಚಿಂತನಾಶೀಲ ಬರವಣಿಗೆ ಮೇಲೆ ಬೆಳಕು ಚೆಲ್ಲುವಂತದ್ದು. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಟಿ.ಯಲ್ಲಪ್ಪನವರು ಯಾವುದೇ ಹಣೆಪಟ್ಟಿಯ ಅಗತ್ಯವಿಲ್ಲದೆ, ಸಾಹಿತ್ಯ ಚರಿತ್ರೆಯಲ್ಲಿ ಅವರ ಹೆಸರು ಅಚ್ಚಳಿಯದಂತೆ ಉಳಿಯಬಲ್ಲ ವ್ಯಕ್ತಿತ್ವ ಯಲ್ಲಪ್ಪನವರದಾಗಿದೆ.

ಟಿ.ಯಲ್ಲಪ್ಪ ಅವರು ಕಡಲಿಗೆ ಕಳಿಸಿದ ದೀಪ, ಚಿಟ್ಟೆ ಮತ್ತು ಜೀವಯಾನ, ನವಿಲಿಗೆ ಬಿದ್ದ ಕತ್ತಲ ಕನಸು, ಕಣ್ಣ ಪಾಪೆಯ ಬೆಳಕು ಇತರೆ ಕವನ ಸಂಕಲನಗಳನ್ನು ಹೊರತಂದಿದ್ದಾರೆ. ಹಾಗೂ ಮಡಿವಾಳ ಮಾಚಿದೇವ ಸಂಶೋಧನಾ ಕೃತಿಯಾಗಿ, ಇಪ್ಪತ್ತೆರಡರರ ಅಳಲು ಪ್ರಬಂಧ ಸಂಕಲನವಾಗಿ ಹಾಗೂ ದಲಿತ ಸಾಹಿತ್ಯ ಅಕಾಡೆಮಿಯ ದಲಿತ ಆತ್ಮ ಚರಿತ್ರೆ ಎಂಬ ಸಂಪಾದನಾ ಕೃತಿಯನ್ನು ರಚಿಸಿರುವುದು ಕಂಡುಬರುತ್ತದೆ. ಹೀಗೆ ಹಲವಾರು ಕೃತಿಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿದ್ದಾರೆ. ಇನ್ನೂ ಹಲವಾರು ಪ್ರಶಸ್ತಿಗಳು ಟಿ.ಯಲ್ಲಪ್ಪ ಅವರನ್ನು ಹುಡುಕಿಕೊಂಡು ಬಂದಿವೆ. ನಾಡೋಜ ಚನ್ನವೀರ ಕಣವಿ ಕಾವ್ಯ ಪ್ರಶಸ್ತಿ, ಜಿ.ಎಸ್.ಎಸ್. ಕಾವ್ಯ ಪ್ರಶಸ್ತಿ, ಡಾ.ನರಹಳ್ಳಿ ಪ್ರಶಸ್ತಿ, ಡಾ.ಸಿದ್ದಲಿಂಗಯ್ಯ ಕಾವ್ಯ ಪ್ರಶಸ್ತಿ, ಹರಿಹರ ಕಾವ್ಯ ಪ್ರಶಸ್ತಿ ಕಾರ್ಯ ಪ್ರಶಸ್ತಿ ಇತ್ಯಾದಿ ಪ್ರಶಸ್ತಿಗಳಿಗೆ ಗೌರವ ಭಾಜನರಾಗಿದ್ದಾರೆ. ಇಷ್ಟಲ್ಲದೇ ಹಲವಾರು ಹಲವಾರು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಕವಿಗೋಷ್ಠಿಗಳಲ್ಲಿ ಕಾವ್ಯವಾಚನ ಮಾಡಿದ್ದಾರೆ. ಪ್ರಬಂಧಗಳನ್ನು ಕೂಡ ಮಂಡನೆ ಮಾಡಿದ್ದಾರೆ.

ಟಿ.ಯಲ್ಲಪ್ಪ ಅವರ ಸಾಹಿತ್ಯ ಕೃಷಿಯು ಅನನ್ಯವಾದದು, ಬಹುಮುಖಿ ಚಿಂತನೆ ಉಳ್ಳದ್ದಾಗಿದೆ. ಚಲನಶೀಲತೆಯುಳ್ಳ ಸಾಹಿತ್ಯ, ಹೊಸ ತಲೆಮಾರಿನ ಕವಿಗಳ ಕಾವ್ಯಗಳೊಂದಿಗೆ ಹಲವಾರು ರೀತಿಯಲ್ಲಿ ಅನುಸಂಧಾನ ಮಾಡಿ ಕಾವ್ಯದ ಹರಿವಿನ ನೆಲೆಗಳಲ್ಲಿ, ತನ್ನದೇ ಆದ ಛಾಪನ್ನು ಮೂಡಿಸಿದ ಶ್ರೇಷ್ಠತೆಯನ್ನು ಪಡೆದಿದ್ದಾರೆ. ದಲಿತರ ಬದುಕಿನ ಅಸ್ತಿತ್ವವನ್ನು ಕಂಡುಕೊಳ್ಳುವ ಗುಣಲಕ್ಷಣಗಳನ್ನು ಹಾಗೂ ನವಸಮಾಜದ ನಿರ್ಮಾಣವು ಟಿ.ಯಲ್ಲಪ್ಪ ಅವರ ಸಾಹಿತ್ಯದಲ್ಲಿ ಎದ್ದು ಕಾಣುತ್ತದೆ.

ಯಲ್ಲಪ್ಪನವರ ಭಾಷೆ ಗ್ರಾಮೀಣ ದಲಿತ ಚಿತ್ರಣವನ್ನು ಕಟ್ಟಿಕೊಡುವುದರ ಜೊತೆಗೆ ನಗರ ಚಿತ್ರಣವನ್ನು ಬೇರೆ ಬೇರೆ ಪ್ರತಿಮೆಗಳಲ್ಲಿ ಹೇಳಿರುವುದು ಸ್ಪಷ್ಟವಾಗುತ್ತದೆ. ಭಾವ ಲೋಕದಿಂದ ಬೌದ್ಧಿಕತೆಗೆ ಹೆಚ್ಚು ಗಮನಹರಿಸಿರುವುದು ಹಾಗೂ ಕವಿತೆಗಳು ಹೆಚ್ಚು ಅರ್ಥಗರ್ಭಿತಗೊಂಡಿವೆ. ಯಲ್ಲಪ್ಪನವರು ಭಾಷೆ ಕಟ್ಟಿಕೊಳ್ಳುವ ಪ್ರತಿಮೆ ರೂಪಕಗಳಿಂದ ಹೊಸದಾಗಿ ಕಾಣಿಸುತ್ತದೆ. ದಲಿತ ಲೋಕವೊಂದರ ಮುಗ್ಧತೆ, ನೋವು, ಸಂಕಟ,

ಪರಂಪರೆಯಿಂದ ಕಳೆದುಕೊಂಡಿದ್ದರ ವೈಚಾರಿಕತೆಯ ಆವರಣದಲ್ಲಿ ಭಾವುಕ ಲೋಕವನ್ನೇ ಕಟ್ಟಿಕೊಡುತ್ತಾರೆ.

ಒಟ್ಟಾರೆಯಾಗಿ ಪ್ರಸ್ತುತ ದಲಿತ ಕಾವ್ಯ ಆಧುನಿಕ ದಲಿತ ಜೀವನ ಕ್ರಮಗಳನ್ನು ಹಾಗೂ ಪಲ್ಲಟಗಳನ್ನು ಹೊಸ ಬಗೆಯ ವಿಚಾರಗಳನ್ನು ದಲಿತ ಕಾವ್ಯ ಮತ್ತು ಜಗತ್ತು ಗಂಭೀರವಾಗಿ ಅಭಿವ್ಯಕ್ತಿಗೊಳ್ಳುವಂತಹ ಕಾವ್ಯ ಕೃಷಿಯನ್ನು ಟಿ.ಯಲ್ಲಪ್ಪನವರು ಮಾಡಿದ್ದಾರೆ. ಹೊಸದೊಂದು ಲೋಕವನ್ನು ಭಿನ್ನ ರೀತಿಯಲ್ಲಿ ಕಟ್ಟಿಕೊಡುವುದನ್ನು ಅವರ ಕವಿತೆಗಳ ಅಧ್ಯಯನದಿಂದ ಮನದಟ್ಟಾಗುತ್ತದೆ. ಜಾತಿ, ಮತ–ಭೇದಗಳಿಂದ, ಅಜ್ಞಾನದ ಅಂಧಕಾರಗಳಿಂದ ತುಂಬಿದ ಕತ್ತಲ ಸಮಾಜದೊಳಗೆ, ಸುಜ್ಞಾನದ ಬೆಳಕನ್ನು ಚೆಲ್ಲುವ ಜ್ಞಾನ ದೀಪಗಳಾಗಿ ಯಲ್ಲಪ್ಪನವರ ಕವಿತೆಗಳು ಹಾಗೂ ಸಾಹಿತ್ಯ ಕೃಷಿಯು ಅಜರಾಮರವಾಗಿ ಬೆಳಗುವುದಾಗಿದೆ. ಹಾಗಾಗಿ ಹೊಸ ತಲೆಮಾರಿನ ದಲಿತ ಕಾವ್ಯದ ಸಂದರ್ಭದಲ್ಲಿ ಹೆಚ್ಚಾಗಿ ಸಹೃದಯರ ಚಿಂತನೆ ಮಾಡುವ ಚಿಂತನೆಯ ಚಿಂತಕರಾಗಿ ಟಿ.ಯಲ್ಲಪ್ಪನವರು ಪ್ರಜ್ವಲಿಸುವರು.

**ಆಕರ ಗ್ರಂಥಗಳು**


- ಯಲ್ಲಪ್ಪ, ಟಿ. (2008). *ಕಡಲಿಗೆ ಕಳಿಸಿದ ದೀಪ.* (ಕವನ ಸಂಕಲನ). ಸಂಚಯ ಪ್ರಕಾಶನ, ಪುಟ. ಮುನ್ನುಡಿ
- ಯಲ್ಲಪ್ಪ, ಟಿ. (2013). *ಚಿಟ್ಟೆ ಮತ್ತು ಜೀವಯಾನ.* (ಕವನ ಸಂಕಲನ). ಅಭಿನವ ಪ್ರಕಾಶನ, ಪುಟ. ಮುನ್ನುಡಿ
- ಯಲ್ಲಪ್ಪ, ಟಿ. (2013). *ನವಿಲಿಗೆ ಬಿದ್ದ ಕತ್ತಲ ಕನಸು.* (ಕವನ ಸಂಕಲನ). ಪ್ರಜ್ಞೆ ಪ್ರಕಾಶನ, ಪುಟ. ಮುನ್ನುಡಿ
- ಯಲ್ಲಪ್ಪ, ಟಿ. (2016). ಕಣ್ಣಪಾಪೆಯ ಬೆಳಕು, (ಕವನ ಸಂಕಲನ). (ಮುನ್ನುಡಿ), ಬೆಳಕು ಪ್ರಕಾಶನ, ಪುಟ. ಮುನ್ನುಡಿ.
- ಯಲ್ಲಪ್ಪ, ಟಿ. *ಇಪ್ಪತ್ತೆರಡರ ಅಳಲು.* ಪ್ರಬಂಧ ಸಂಕಲನದ ಭಾಗಗಳ ಅಭ್ಯಾಸದಿಂದ.


**ಪರಾಮರ್ಶನ ಗ್ರಂಥಗಳು**


- ಅರವಿಂದ ಮಾಲಗತ್ತಿ. (1997). *ದಲಿತ ಸಾಹಿತ್ಯ ಪ್ರವೇಶಿಕೆ.* ಶೈಲ ಪ್ರಕಾಶನ.
- ಅರವಿಂದ ಮಾಲಗತ್ತಿ. (2009). *ದಲಿತ ಸಾಹಿತ್ಯ ಪರ್ವ.* ಪ್ರಚಾರ ಪುಸ್ತಕ ಮಾಲೆ, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ.
- ಅರವಿಂದ ಮಾಲಗತ್ತಿ. (2014). *ಸಾಹಿತ್ಯ ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ,* ಕನ್ನಡ ಸಾಹಿತ್ಯ ಪರಿಷತ್ತು.
- ಅರವಿಂದ ಮಾಲಗತ್ತಿ (ಪ್ರ.ಸಂ). (2014). *ಕನ್ನಡ ಸಾಹಿತ್ಯ ಚರಿತ್ರೆ (ಸಂಪುಟ–1), ತಾತ್ವಿಕ ವಿಮರ್ಶೆ.* (ಸಂಸ್ಥೆಯ ಪ್ರಕಟಣೆ ಮಾಲೆ–554) ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.
- ಚಿನ್ನಸ್ವಾಮಿ ಸೋಸಲೆ, ಎನ್. (2023). *ಪ್ರಥಮ ತಲೆಮಾರಿನ ದಲಿತರು ಚಾರಿತ್ರಿಕ ನೋಟ.* ಯಾಜಿ ಪ್ರಕಾಶನ.
- ದೇವಯ್ಯ ಹರವೆ. (1982). *ದಲಿತ ಸಾಹಿತ್ಯ ಮತ್ತು ಇತರೆ ಲೇಖನಗಳು.* ರಶ್ಮಿ ಉದ್ಯಮ ಕೇಂದ್ರ.
- ಗಿರಿಯಪ್ಪ. (2018). *ದಲಿತ ಕಾವ್ಯ ಸ್ವರೂಪ ಮತ್ತು ಅನನ್ಯತೆ.* ಆಕೃತಿ ಆಶಯ ಪಬ್ಲಿಕೇಷನ್ಸ್.
- ಮುನಿವೆಂಕಟಪ್ಪ, ವಿ. (2010). *ಕನ್ನಡ ದಲಿತ ಸಾಹಿತ್ಯ.* ವಿಚಾರವಾದಿ ಪ್ರಕಾಶನ.
- ಯರವಿನತೆಲಿಮಠ, ಸಿ.ಆರ್. (2020). *ದಲಿತ ಬಂಡಾಯ ಸಾಹಿತ್ಯ ವಿಮರ್ಶೆ.* ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.